ಕೈಗಾರಿಕಾ ತರಬೇತಿ ಕೇಂದ್ರಗಳ ಮಂಜೂರು

59(372) ಶ್ರೀ ಬಾಲರಾಜ್ ಎಸ್(ಕೊಳ್ಳೇಗಾಲ)

ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಿಗೆ ಐ ಟಿ ಐ (ಕೈಗಾರಿಕಾ ತರಬೇತಿ ಕೇಂದ್ರ) ಕಾಲೇಜುಗಳನ್ನು ಮಂಜೂರು ಮಾಡಲು ಕೋರಿರುವುದು ಮತ್ತು ಅವಶ್ಯಕವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಇ) ಹಾಗಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಇಕ್ಬಾಲ್ ಅನ್ಸಾರಿ

ಅ) ಯಳಂದೂರು ತಾಲ್ಲೂಕಿನಲ್ಲಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಮಂಜೂರು ಮಾಡಲು ಕೋರಿಕೆ ಬಂದಿಲ್ಲ

ಕೊಳ್ಳೇಗಾಲ ತಾಲ್ಲೂಕಿನ ಹನ್ನೂರು ಕ್ಷೇತ್ರದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಮಂಜೂರು ಮಾಡಲು ಪ್ರಸ್ತಾವನೆ ಬಂದಿರುತ್ತದೆ ಕೊಳ್ಳೇಗಾಲದಲ್ಲಿ ಒಂದು ಸರ್ಕಾರಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ

ಆ) ಕೊಳ್ಳೇಗಾಲ ತಾಲ್ಲೂಕು, ಹುನ್ನೂರು ಕ್ಷೇತ್ರದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಪರಿಶೀಲನೆಯಲ್ಲಿದೆ

ಇ) ಆಯವ್ಯಯದ ಲಭ್ಯತೆಯನ್ನು ಆಧರಿಸಿ ಮಂಜೂರು ಮಾಡಲ್ಪಡುತ್ತದೆ

ಶ್ರೀ ಎಸ್ ಬಾಲರಾಜ್ ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ (ಅ) ಪ್ರಶ್ನೆಗೆ ಮಾನ್ಯ ಸಚಿವರು ಕೋರಿಕೆ ಬಂದಿಲ್ಲವೆಂದು ಉತ್ತರ ನೀಡಿದ್ದಾರೆ ನಾನು ಎರಡು ಪತ್ರಗಳನ್ನು ಬರೆದಿದ್ದು ಮತ್ತು ಮಾನ್ಯ ಸಚಿವರಲ್ಲಿ ಮೌಖಿಕವಾಗಿ ಕೋರಿಕೆ ಸಲ್ಲಿಸಿದ್ದೇನೆ ಅವರು ಕೋರಿಕೆ ಬಂದಿಲ್ಲವೆಂದು ಹೇಳುತ್ತಿರುವುದು ನನಗೆ ನೋವಾಗುತ್ತಿದೆ ಅವಶ್ಯಕತೆ ಇರುವುದು ಸರ್ಕಾರದ

ಗಮನಕ್ಕೆ ಬಂದಿದೆಯೇ ಎಂದ ಮೇಲೆ ತಾಲ್ಲೂಕು ಕೇಂದ್ರಗಳಲ್ಲೊಂದು ITI college ಇಲ್ಲವೆಂದರೆ ಬಹಳ ನೋವಾಗುತ್ತದೆ ಆ ದೃಷ್ಟಿಯಿಂದ ಅದು ಅವಶ್ಯಕತೆ ಇದೆಯೆಂದು ತಮಗೆ ಅನಿಸಿದೆಯೇ? ಈ ಸಾಲಿನಲ್ಲಿ ಮಂಜೂರು ಮಾಡುತ್ತೀರಾ ಎಂದು ಕೇಳುತ್ತೇನೆ

ಶ್ರೀ ಇಕ್ಬಾಲ್ ಅನಸಾರಿ ಮಾನ್ಯ ಅಧ್ಯಕ್ಷರೆ, ಸ್ನೇಹಿತರಾದ ಬಾಲರಜ್ ರವರು ಪತ್ರ ಬರೆದು ಕೊಟ್ಟಿದ್ದಾರೆ ಆದರೆ, ಕೊಳ್ಳೇಗಾಲ ತಾಲ್ಲೂಕು ಮತ್ತು ಯಳಂದೂರು ತಾಲ್ಲೂಕುಗಳಿಗೆ ITI college ಕೇಳಿದ್ದಾರೆ ಈಗಾಗಲೇ ಕೊಳ್ಳೇಗಾಲ ತಾಲ್ಲೂಕಿನಲ್ಲಿ ITI government college ನಡೆಯುತ್ತಿದೆ ಯಳಂದೂರಿನಲ್ಲಿ ಖಾಸಗಿ ITI college ಇದೆ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಬಿ ಆರ್ ಹಿಲ್ಸ್ ಯಳಂದೂರು ಇಲ್ಲಿ ಕಾಲೇಜಿದೆ ಹೀಗಾಗಿ ನಾವು ಈ ವರ್ಷ ಹಿಂದುಳಿದ ತಾಲ್ಲೂಕುಗಳು ಮತ್ತು ಬೇರೆ ಬೇರೆ ಅವಶ್ಯಕತೆ ಇರುವ ಕಡೆ ಅಳವಡಿಸಿದ್ದೇವೆ ನಾನು ಯಳಂದೂರಿನಲ್ಲಿ 2008–09 ರಲ್ಲಿ ಅಳವಡಿಸಿ ಮಾಡಿಕೊಡುತ್ತೇನೆಂದು ಹೇಳಲಿಕ್ಕೆ ಬಯಸುತ್ತೇನೆ

ಶ್ರೀ ವಾಟಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, 363 ನೇ ಪ್ರಶ್ನೆಯನ್ನು ಮಾನ್ಯ ಆರೋಗ್ಯ ಸಚಿವರಿಗೆ ಕೇಳಲಿಕ್ಕೆ ಬಯಸುತ್ತೇನೆ

ಶ್ರೀ ಜೆ ಸಿ ಮಾದುಸ್ವಾಮಿ 365 ನೇ ಪ್ರಶ್ನೆ ಎಂದು ಇದೆ

ಅಧ್ಯಕ್ಷರು ವಾಟಾಳ್ ನಾಗರಾಜ್‌ರವರು ಆರೋಗ್ಯ ಸಚಿವರಿಗೆ ಎಂದು ಕೇಳುತ್ತಿದ್ದಾರೆ

ಶ್ರೀ ಜೆ ಸಿ ಮಾದುಸ್ವಾಮಿ ಇದೇನು ನಮಗೆ ಅರ್ಥವಾಗುತ್ತಿಲ್ಲ ಅವರೇ ಹೇಳಬೇಕು 365 ನೇ ಪ್ರಶ್ನೆಗೆ ಸಮಾಜಕಲ್ಯಾಣ ಸಚಿವರು ಉತ್ತರ ನೀಡಬೇಕೆಂದು ಪ್ರಿಂಟ್ ಆಗಿದೆ ಅವರೇಕೋ ಆರೋಗ್ಯ ಸಚಿವರನ್ನೇ ಕೇಳುತ್ತಿದ್ದಾರೆ

ಶ್ರೀ ವಾಟಳ್ ನಾಗರಾಜ್ 363 ನೇ ಪ್ರಶ್ನೆ ಕೇಳುವುದಕ್ಕೆ ಒಂದು ವಿಶೇಷವಿದೆ, ನಾನು ಚುಕ್ಕೆ ಗುರುತಿನ ಪ್ರಶ್ನೆ ಎಂದು ಹೇಳಿ ನೇರವಾಗಿ ಬರೆದು ಸ್ಪಷ್ಟವಾಗಿ ಕನ್ನಡ ಅಕ್ಷರದಲ್ಲಿ ಬರೆದು ಬೆಂಗಳೂರು ನಗರವೂ ಸೇರೆಇದಂತೆ ರಾಜ್ಯದಲ್ಲಿ ನಾಯಿಗಳ ಕಡಿತದಿಂದಾಗಿ ಇಲ್ಲಿಯವರೆಗೆ ಸತ್ತವರ ಸಂಖ್ಯೆ ಎಷ್ಟು ಮತ್ತು ಇತರ ಅನೇಕ ವಿಚಾರಗಳನ್ನು ಕೇಳದ್ದೇನೆ ಇದನ್ನು

ತಮ್ಮ ಗಮನಕ್ಕೆ ತರುತ್ತಿದ್ದೇನೆ ಏನಾಗಿದೆ ಎಂದು ಸ್ಪಷ್ಟ ಪಡಿಸಬೇಕಿಲ್ಲ ಆದ್ದರಿಂದ ಚುಕ್ಕೆ ಗುರುತಿನ ಪ್ರಶ್ನೆ ಎಂದು ಬರೆದಿದ್ದು, ಅದು ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬರಲಿಲ್ಲ ನಾನು ವಸತಿ ಶಾಲೆಗಳ ಬಗ್ಗೆ ಚುಕ್ಕೆ ಗುರುತಿನ ಪ್ರಶ್ನೆ ಹಾಕಿರಲಿಲ್ಲ ನಾನು ಕೇಳಿದ ಪ್ರಾಮುಖ್ಯವಾದ ಪ್ರಶ್ನೆ ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬರಲಿಲ್ಲ ನಾಯಿಗಳು ಸಾರ್ವಜನಿಕರಿಗೆ ಕಡಿದಿವೆ ಎಷ್ಟು ನಾಯಿಗಳಿಂದ ಎಷ್ಟು ಜನ ಸತ್ತಿದ್ದಾರೆ? ಪರಿಸ್ಥಿತಿ ಏನು ಎಂದು ಕೇಳಿದ್ದೆ

ಅಧ್ಯಕ್ಷರು ಈಗ ಬಂದಿರುವುದರ ಬಗ್ಗೆ ಪ್ರಶ್ನೆ ಕೇಳಿ ಬಹುಶಃ ಅದು unstarred ಆಗಿರಬೇಕು ಅದಕ್ಕೆ ಅದು ಬಾಲೆಟ್‌ನಲ್ಲಿ ಬಂದಿಲ್ಲವೆಂದು ಕಾಣುತ್ತದೆ

ಶ್ರೀ ವಾಟಳ್ ನಾಗರಾಜ್ ಅದು ಹೇಗೆ ಸಾರ್ ತಾವು ಮಾಡಿ ನಿಮಗೆ ಸಂಪೂರ್ಣವಾದ ಅಧಿಕಾರವಿದೆ ಪ್ರಾಮುಖ್ಯವಾದ ಪ್ರಶ್ನೆ ಬಿಟ್ಟು ಇನ್ಯಾವುದೋ ಪ್ರಶ್ನೆ ಕೇಳುವುದಲ್ಲ ಇದೇಕೆ ಈ ತರಹ ಆಯಿತು

ಅಧ್ಯಕ್ಷರು ಬ್ಯಾಲೆಟ್ ನಲ್ಲಿ ಬಂದಿಲ್ಲವೆಂದು ಕಾಣಿಸುತ್ತದೆ ಈ ಪ್ರಶಗನೆ ಬಗ್ಗೆ ಏನಾದರೂ ಕೇಳುವುದಿದ್ದರೆ ಕೇಳಿ 365 ನೇ ಪ್ರಶ್ನೆ ಬಗ್ಗೆ ಏನೂ ಕೇಳುವುದಿಲ್ಲವೇ?

ಶ್ರೀ ವಾಟಳ್ ನಾಗರಾಜ್ 365 ನೇ ಪ್ರರ್ಶನೆಯನ್ನು ಅಂಧ ಶಕ್ತಿಯುತವಾಗಿ ಕೇಳುವಂಧಾದ್ದೇನೂ ಇಲ್ಲ ನಾನು 365 ನೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ

ಅಧ್ಯಕ್ಷರು ಬ್ಯಾಲೆಟ್ ಆಗಿಲ್ಲ ತಾವು ಕೇಳಿದ್ದೀರಿ ಬ್ಯಾಲೆಟ್‌ನಲ್ಲಿ ಆಗಲೇ ಬಂದಿದೆ